ಎರಡು ಶಬ್ದಗಳ ಅರ್ಥ ಗೊತ್ತಾಗ ಬೇಡವೇ? ಅವರ ಮಮತೆಯನ್ನು ಅವನ ಪಾಲಿಗೆ ಇಲ್ಲವಾಗಿಸುವುದೇ? ಇದಕ್ಕೋಸ್ಕರ ನಿಮಗೆ ಇ – ಮೇಲ್ ಕಳಿಸಿದೆ ನಾನು. ಸುನಿಲ್‌ಗೆ ಈ ವಿಚಾರ ಗೊತ್ತಿಲ್ಲ. ನಿಮಗೆ ತೊಂದರೆ ಆಗಲಿಲ್ಲ ತಾನೇ?"

"ನನ್ನ ಮೊಮ್ಮಗನನ್ನು ನಾನು ನೋಡಬರುವುದು ತೊಂದರೆಯೇ? ಒಳ್ಳೆ ಕೆಲಸ ಮಾಡಿದೆ."

"ನನಗೆ ಒಂದೇ ಆಸೆ, ಅತ್ತೆ, ನಿಮ್ಮ ಮಗ ಹುಚ್ಚಾಪಟ್ಟೆ ಆಡುವುದನ್ನು ಬಿಟ್ಟು ಸರಿಯಾಗಿ ವರ್ತಿಸಿದರೆ ಆಗಿದ್ದನ್ನೆಲ್ಲ ಮರೆತು ನಾವು ಸರಿಯಾಗಿರಬಹುದು. ನೀವು ಇಲ್ಲಿಗೆ ಬರ್ತಾ ಇರಿ, ನಾವೂ ಅಲ್ಲಿಗೆ ಬರ್ತಾ ಇರ್ತೀವಿ. ನೋಡಿ ನಿಮ್ಮನ್ನು ನೋಡಿದ ತಕ್ಷಣ ನಿಮ್ಮ ಜೊತೆ ಹೇಗೆ ಹೊಂದಿಕೊಂಡಿದ್ದಾನೆ. ಅವನಿಗೆ ಯಾರು ಹೇಳಿಕೊಟ್ಟಿದ್ದರು ಇದನ್ನ?"

ಎಂತಹ ಜವಾಬ್ದಾರಿ ಮಾತು ಎನಿಸಿತು ರಾಗಿಣಿಗೆ.

ರಾಗಿಣಿ ಟೋಕಿಯೊಗೆ ಬಂದು ಮೂರು ದಿನಗಳಾಗಿದ್ದವು. ಈಗಾಗಲೇ ಅವರಿಗೆ ಹಯೂಟೋನನ್ನು ಬಿಟ್ಟಿರುವುದು ಕಷ್ಟ ಎನಿಸಿತು. ಬೆಳಿಗ್ಗೆ ಎದ್ದು ಹೋಟೆಲಿನಿಂದ ಮಗನ ಮನೆಗೆ ಬಂದುಬಿಡುತ್ತಿದ್ದರು. ಸಂಜೆ ಮೊಮ್ಮಗನನ್ನು ಆಡಿಸುತ್ತ ಕುಳಿತ್ತಿದ್ದಾಗ ಫೋನ್ ಬಂದಿತು. ಉತ್ತರಿಸಿದ ರಿಂಕೊ ಹೇಳಿದಳು – "ಸುನಿಲ್ ಊರಿಗೆ ಬಂದಿದ್ದಾನೆ. ಇನ್ನು ಅರ್ಧ ಗಂಟೆಯಲ್ಲಿ ಇಲ್ಲಿರುತ್ತಾನೆ." ಅವಳಿಗೆ ಯಾಕೋ ಗಾಬರಿ ಆದಂತಿತ್ತು. "ಬೇಕಿದ್ದರೆ ನೀವು ಹೋಟೆಲಿಗೆ ಹೋಗಿ ಅಲ್ಲಿಯೇ ಇರಿ. ನಾನು ಅವನನ್ನು ಕರೆದುಕೊಂಡು ನಾಳೆ ಬರುತ್ತೇನೆ."
"ಹಾಗೇಕೆ ರಿಂಕೊ, ನನ್ನ ಮಗ ಬಂದರೆ ನನಗೇನು ಹೆದರಿಕೆ. ಅವನನ್ನೂ ನೋಡಿದ ಹಾಗಾಯಿತು. ಇಲ್ಲಿಯೇ ಇರುತ್ತೇನೆ." ಎಂದರು.

ಸುನಿಲ್ ಮನೆಯನ್ನು ಪ್ರವೇಶಿಸುತ್ತಿದ್ದಂತೆ ಹಯೂಟೊ ಓಡಿ ತಂದೆಯನ್ನು ಅಪ್ಪಿ "ಒಬಾಸಾನ್, ಒಬಾಸಾನ್" ಎಂದು ಅಜ್ಜಿಯತ್ತ ಕೈತೋರಿಸಿದ. ಸುನಿಲ್ ತಾಯಿಯನ್ನು ನೋಡಿದ. ಆಶ್ಚರ್ಯವಾಯಿತು. ಹಿಂದಿದ್ದ ಕೋಪ ತಾಪಗಳೆಲ್ಲಾ ಮರೆತುಹೋದವು. ನೇರ ರಾಗಿಣಿಯ ಬಳಿ ಬಂದು ಹರ್ಷಚಿತ್ತನಾಗಿ, "ಯಾವಾಗ ಬಂದಿ?" ಎಂದ.

ಧಾರಾಕಾರವಾಗಿ ಕಣ್ಣೀರು ಸುರಿಸುತ್ತಾ ರಾಗಿಣಿ ಮಗನನ್ನು ಅಪ್ಪಿಕೊಂಡರು. ರಿಂಕೊ ನಂಬಲಾರದೇ ಆ ದೃಶ್ಯವನ್ನು ನೋಡುತ್ತಾ ನಿಂತಳು.

## ಸಿಡ್ನಿ ಶ್ರೀನಿವಾಸ್

ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಸಿಡ್ನಿ ಶ್ರೀನಿವಾಸ್ ಮೂಲತಃ ಬೆಂಗಳೂರಿನವರು. ಕನ್ನಡದ ಕಥೆಗಾರರು. ಸಿಡ್ನಿ ವಿಶ್ವವಿದ್ಯಾಲಯದ 'ಏರೋಸ್ಪೇಸ್ ಅಂಡ್ ಮೆಕ್ಯಾನಿಕಲ್ ಎಂಜಿನಿಯರಿಂಗ್' ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಮೂರು ದಶಕ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಕನ್ನಡ – ಇಂಗ್ಲಿಷ್‌ನಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.